ದನಗಳ ಜಾತ್ರೆಗಳು

1317(1612); ಶ್ರೀ: ಪುಟ್ಟಣ್ಣಯ್ಯ ಕೆ.ಎಸ್. (ಮೇಲುಕೋಟೆ)

ಅ) ಕರ್ನಾಟಕ ರಾಜ್ಯದಲ್ಲಿ ಎಷ್ಟು ಕಡೆಗಳಲ್ಲಿ ದನಗಳ ಜಾತ್ರೆಯನ್ನು ಮಾಡಲಾಗುತ್ತದೆ;

ಆ) ಈ ಜಾತ್ರೆಗಳನ್ನು ನಡೆಸಲು ಸರ್ಕಾರ ಎಷ್ಟು ಹಣವನ್ನು ವ್ಯಯ ಮಾಡುತ್ತಿದೆ;

ಇ) ಹಾಗಿದ್ದಲ್ಲಿ ಪ್ರತಿ ಜಾತ್ರೆಯಲ್ಲಿ ದನಗಳಿಗೆ ಬಹುಮಾನ ನೀಡಲು ಕನಿಷ್ಠ ₹ 5.00 ಲಕ್ಷಗಳನ್ನು ಕೊಡಲು ಸರ್ಕಾರ ಕ್ರಮಕೈಗೊಂಡಿದೆಯೇ?

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಪಶು ಸಂಗೋಪನಾ ಸಚಿವರು)

ಅ) ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳ 164 ಸ್ಥಳಗಳಲ್ಲಿ ದನಗಳ ಜಾತ್ರೆಗಳು ನಡೆಯುತ್ತವೆ.

ಆ) ಈ ಜಾತ್ರೆಗಳನ್ನು ನಡೆಸಲು ಇಲಾಖೆಯಿಂದ ಯಾವುದೇ ಅನುದಾನ ನಿಗಧಿಯಾಗಿರುವುದಿಲ್ಲ ಹಾಗೂ ಈ ನಿಟ್ಟಿನಲ್ಲಿ ವೆಚ್ಚವನ್ನು ಸಹ ಮಾಡುತ್ತಿಲ್ಲ.

ಇ) ಇಲಾಖಾವತಿಯಿಂದ ಈ ಜಾತ್ರೆಗಳಿಗೆ ಯಾವುದೇ ಅನುದಾನ ನಿಗದಿಯಾದ ಕಾರಣ ಬಹುಮಾನವಾಗಿ ಯಾವುದೇ ಹಣ ನೀಡುವ ಕಾರ್ಯಕ್ರಮ ಇರುವುದಿಲ್ಲ.

ಆದರೆ ಆಯಾ ಜಾತ್ರಾ ದೇವಸ್ಥಾನದ ಜಾತ್ರಾ ಸಮಿತಿ, ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯತ್ ವತಿಯಿಂದ ₹ 5,000/-- ದಿಂದ ₹ 35,000/--ದ ವರೆಗೆ ಬಹುಮಾನವನ್ನು ನೀಡುವ ವ್ಯವಸ್ಥೆಯನ್ನು ಮಾಡಿಕೊಂಡು ಉತ್ತಮ ರಾಸುಗಳ ಮಾಲೀಕರಿಗೆ ಬಹುಮಾನ ನೀಡುವ ಕ್ರಮವಿದೆ.